## ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ. ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ, ಆನೇಕಲ್.

| | |
|---|---|
| ಓ.ಎಸ್. ನಂ | **460/2017** |
| ಪಿ.ಡಬ್ಲ್ಯೂ | **01** |
| ದಿನಾಂಕ | **03.08.2022** |

**ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು ಃ ಶ್ರೀ ಹೆಚ್.ಎಸ್. 1 ನೇ ಪ್ರತಿವಾದಿ ಪರ ವಕೀಲರಿಂದ.**

ದಾವಾ ಅನುಸೂಚಿ ಸ್ವತ್ತಿನ ಸರ್ವೆ ನಂ.85/1 ಆಗಿರತ್ತದೆ. ಸದರಿ ಜಮೀನು ಕೃಷಿ ಜಮೀನು ಆಗಿರುತ್ತದೆ, ಅದು ಭೂ ಪರಿವರ್ತನೆ ಆಗಿರುವುದಿಲ್ಲ. ದಾವಾ ಅನುಸೂಚಿ ಸ್ವತ್ತಿನ ಉತ್ತರ ದಿಕ್ಕಿಗೆ ತಿಮ್ಮರಾಯಪ್ಪರವರ ಆಸ್ತಿ ಇರುತ್ತದೆ, ಅದರ ಸರ್ವೆ ನಂ.67 ಆಗಿರುತ್ತದೆ. ಅಂತೆಯೇ ದಕ್ಷಿಣ ದಿಕ್ಕಿಗೆ ಚಂದ್ರಾರೆಡ್ಡಿಯವರ ಆಸ್ತಿ ಇರುತ್ತದೆ, ಅದರ ಸರ್ವೆ ನಂ.85/2 ಆಗಿರುತ್ತದೆ. ಅನುಸೂಚಿ ಸ್ವತ್ತಿನ ಪೂರ್ವ ದಿಕ್ಕಿಗೆ ಸರ್ವೆ ನಂ.69/1, 69/2, 69/3 ಮತ್ತು 70 ಸ್ವತ್ತುಗಳು ಇರುತ್ತವೆ, ಅವುಗಳ ಮಾಲೀಕರು ರತ್ನಮ್ಮ ಆಗಿರುತ್ತಾರೆ. ಸರ್ವೆ ನಂ.69/2 ಮತ್ತು 70 ರ ಆಸ್ತಿಯ ಪೂರ್ವ ದಿಕ್ಕಿಗೆ ಸರ್ವೆ ನಂ.61 ರ ಆಸ್ತಿ ಇರುತ್ತದೆ ಎಂದರೆ ಸರಿ. ಸದರಿ ಆಸ್ತಿಗಳ ಪೂರ್ವ ದಿಕ್ಕಿಗೆ ಸರ್ವೆ ನಂ.61 ರ ಪೂರ್ವ ದಿಕ್ಕಿನಿಂದ ಸರ್ವೆ ನಂ.67 ರ ಉತ್ತರ ದಿಕ್ಕಿನವರೆಗೂ ದಾಸನಪುರ-ಭಕ್ತಿಪುರ-ಅತ್ತಿಬೆಲೆ ರಸ್ತೆ ಇರುತ್ತದೆ ಎಂದರೆ ಸರಿ. ಅಂತೆಯೇ ಸದರಿ ರಸ್ತೆಯು ಸರ್ವೆ ನಂ.69/2, 69/3 ರ ಉತ್ತರ ದಿಕ್ಕಿಗೆ ಬರುತ್ತದೆ ಎಂದರೆ ಸರಿ. ಸರ್ವೆ ನಂ.70 ರ ದಕ್ಷಿಣ ಭಾಗಕ್ಕೆ ಸರ್ವೆ ನಂ.71 ಇದೆ ಎಂದರೆ ಸರಿ. ಈಗ ನಾನು ನೋಡುತ್ತಿರುವ ನಕ್ಷೆಯ ಪ್ರಕಾರ ಆಸ್ತಿಗಳು ಇರುತ್ತದೆ ಎಂದರೆ ಸರಿ. ಸಾಕ್ಷಿಯು ಸದರಿ ದಾಖಲಾತಿಯನ್ನು ಒಪ್ಪಿದ್ದರಿಂದ ಅದನ್ನು ನಿಡಿ 1 ಎಂದು ಗುರುತಿಸಲಾಯಿತು.

ಸರ್ವೆ ನಂ.85/1 ರಲ್ಲಿ ನಾವು ಮೂರು ಮನೆಗಳನ್ನು ನಿರ್ಮಾಣ ಮಾಡಿರುತ್ತೇವೆ. ಈಗ ನಾನು ನಮ್ಮ ಮನೆಗಳ ಛಾಯಾಚಿತ್ರಗಳನ್ನು ನೋಡುತ್ತಿದ್ದೇನೆ. ಸಾಕ್ಷಿಯು ಸದರಿ ಛಾಯಾಚಿತ್ರಗಳನ್ನು ಒಪ್ಪಿದ್ದರಿಂದ ಅವುಗಳನ್ನು ನಿಡಿ 2 ಮತ್ತು 3 ಎಂದು ನಿಶಾನೀಕರಿಸಲಾಯಿತು. ನಿಡಿ 2 ಮತ್ತು 3 ರಲ್ಲಿ ಕಾಣ ಸಿಗುತ್ತಿರುವ ರಸ್ತೆಯು ಭಕ್ತಿಪುರ-ದಾಸನಪುರ-ಅತ್ತಿಬೆಲೆ ಮುಖ್ಯ ರಸ್ತೆಗೆ ತಲುಪುವ ರಸ್ತೆ ಎಂದರೆ ಸರಿ. ಸದರಿ ರಸ್ತೆಯು ಸರ್ವೆ ನಂ.85 ರಲ್ಲಿ ಇರುತ್ತದೆ ಹಾಗೂ ಅದು ಸರ್ವೆ ನಂ.71 ಕ್ಕೆ ತಲುಪುತ್ತದೆ ಎಂದರೆ ಸರಿ. ಈಗ ನಾನು ಛಾಯಾಚಿತ್ರಗಳನ್ನು ನೋಡುತ್ತಿದ್ದು, ಅಲ್ಲಿ ಕಾಣಸಿಗುತ್ತಿರುವ ರಸ್ತೆಯು ಸರ್ವೆ ನಂ.72 ರ ಮುಖಾಂತರ ಭಕ್ತಿಪುರ-ದಾಸನಪುರ-ಅತ್ತಿಬೆಲೆ

ಮುಖ್ಯ ರಸ್ತೆಗೆ ತಲುಪುತ್ತದೆ ಎಂದರೆ ಸರಿ. ಸಾಕ್ಷಿಯು ಸದರಿ ಛಾಯಾಚಿತ್ರವನ್ನು ಒಪ್ಪಿದ್ದರಿಂದ ಅವುಗಳನ್ನು ನಿಡಿ 4 ಮತ್ತು 5 ಎಂದು ನಿಶಾನೀಕರಿಸಲಾಯಿತು. ಈಗ ನಾನು ಎರಡು ಛಾಯಾಚಿತ್ರಗಳನ್ನು ನೋಡುತ್ತಿದ್ದು, ಅಲ್ಲಿ ಕಾಣಸಿಗುತ್ತಿರುವ ರಸ್ತೆಯು ಸರ್ವೆ ನಂ.71 ರಲ್ಲಿರುವ ರಸ್ತೆಯಾಗಿದ್ದು, ಸದರಿ ರಸ್ತೆಯು ಸರ್ವೆ ನಂ.72 ರ ಮುಖಾಂತರ ಭಕ್ತಿಪುರ-ದಾಸನಪುರ-ಅತ್ತಿಬೆಲೆ ಮುಖ್ಯ ರಸ್ತೆಗೆ ತಲುಪುತ್ತದೆ ಎಂದರೆ ಸರಿ. ಸಾಕ್ಷಿಯು ಸದರಿ ಛಾಯಾಚಿತ್ರಗಳನ್ನು ಒಪ್ಪಿದ್ದರಿಂದ ಅವುಗಳನ್ನು ನಿಡಿ 6 ಮತ್ತು 7 ಎಂದು ಗುರುತಿಸಲಾಯಿತು. ನಿಡಿ 2 ಮತ್ತು 3 ರಲ್ಲಿ ಕಾಣಸಿಗುತ್ತಿರುವ ರಸ್ತೆಯು ಸರ್ವೆ ನಂ.85/1 ರ ರಿಂದ ಸರ್ವೆ ನಂ.85/2 ರ ಮೂಲಕ ಹಾದು ಹೋಗಿ ಸರ್ವೆ ನಂ.71 ರಲ್ಲಿರುವ ರಸ್ತೆಗೆ ತಲುಪುತ್ತದೆ ಎಂದರೆ ಸರಿ. ಈಗ ನಾನು ಎರಡು ಛಾಯಾಚಿತ್ರಗಳನ್ನು ನೋಡುತ್ತಿದ್ದು, ಅದು ಸರ್ವೆ ನಂ.61 ರ ಮುಖ್ಯ ದ್ವಾರ ಎಂದರೆ ಸರಿ. ಸಾಕ್ಷಿಯು ಸದರಿ ಛಾಯಾಚಿತ್ರಗಳನ್ನು ಒಪ್ಪಿದ್ದರಿಂದ ಅವುಗಳನ್ನು ನಿಡಿ 8 ಮತ್ತು 9 ಎಂದು ನಿಶಾನೀಕರಿಸಲಾಯಿತು. ಸದರಿ ಛಾಯಾಚಿತ್ರಗಳಲ್ಲಿರುವ ಮುಂಭಾಗದ ರಸ್ತೆಯು ಸರ್ವೆ ನಂ.72 ರಲ್ಲಿ ಇರುವ ರಸ್ತೆಗೆ ತಲುಪುತ್ತದೆ ಎಂದರೆ ಸರಿ. ಆ ರಸ್ತೆಯು ಭಕ್ತಿಪುರ-ದಾಸನಪುರ-ಅತ್ತಿಬೆಲೆ ಮುಖ್ಯ ರಸ್ತೆಗೆ ತಲುಪುತ್ತದೆ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿದಾರರಿಗೆ ಓದಿ ಹೇಳಲಾಯಿತು)**

**ಓ.ಹೇ.ಕೇ. ಸರಿ ಇದೆ.**

ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾಯಿಕ.ದಂಡಾಧಿಕಾರಿಗಳು, ಆನೇಕಲ್.